# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 15.12.2022 ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ರಾಣಿ ಅಬ್ಬಕ್ಕ (ಹೊಸ ಸೆನೆಟ್) ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2022-23 ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು**

**ಅನುಪಸ್ಥಿತರು**

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು, ಎಲ್ಲಾ ಅಧಿಕಾರಿಗಳು, ಸದಸ್ಯರುಗಳು, ವಿಶೇಷ ಆಹ್ವಾನಿತರು ಮತ್ತು ಮಾಧ್ಯಮ ಮಿತ್ರರನ್ನು ಸಭೆಗೆ ಸ್ವಾಗತಿಸಿದರು .

- **ಸ್ವಾಗತ**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(ix)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ವಿಶ್ವವಿದ್ಯಾನಿಲಯದ ಡೀನರ ನೆಲೆಯಲ್ಲಿ ನಾಮ ನಿರ್ದೇಶನಗೊಂಡಿರುವ, ಪ್ರೊ .ಎಮ್. ಜಯಶಂಕರ್, ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಜ್ಞಾನ ಕಾವೇರಿ ,ಸ್ನಾತಕೋತ್ತರ ಕೇಂದ್ರ, ಚಿಕ್ಕಅಳುವಾರ ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 30(1)(xiii)ರ ಪ್ರಕಾರ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರ ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಸದಸ್ಯರಾಗಿರುವ ಡಾ. ಪರಮೇಶ್ವರ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

- **ಕೃತಜ್ಞತೆ**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(ix)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ವಿಶ್ವವಿದ್ಯಾನಿಲಯದ ಡೀನರ ನೆಲೆಯಲ್ಲಿ ನಾಮ ನಿರ್ದೇಶನಗೊಂಡಿದ್ದ, ಪ್ರೊ.ಮಂಜುನಾಥ ಪಟ್ಟಾಭಿ, ಪ್ರಾಧ್ಯಾಪಕರು, ವಸ್ತು ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಇವರ ಸದಸ್ಯತ್ವದ ಅವಧಿಯು ದಿನಾಂಕ 30.11.2022ರಂದು ಕೊನೆಗೊಂಡಿರುವುದರಿಂದ, ಶೈಕ್ಷಣಿಕ ಮಂಡಳಿಯ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(xiii)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರ ನೆಲೆಯಲ್ಲಿ ಭಾಗವಹಿಸುತ್ತಿದ್ದ ಪ್ರೊ. ಕಿಶೋರಿ ನಾಯಕ್ .ಕೆ ,ಪ್ರಾಧ್ಯಾಪಕರು , ಸ್ನಾತಕೋತ್ತರ ಆಂಗ್ಲ ಅಧ್ಯಯನ ವಿಭಾಗ ಇವರನ್ನು ಶೈಕ್ಷಣಿಕ ಮಂಡಳಿಯ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

**I. ದಿನಾಂಕ 27.09.2022ರಂದು ನಡೆದ ಶೈಕ್ಷಣಿಕ ಮಂಡಳಿಯ 2022-23ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.**

ದೃಢೀಕರಿಸಲಾಯಿತು.

**II. ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಪರಿನಿಯಮ / ವಿನಿಯಮಗಳು.**

**ವಿಷಯ:** ಪಿ.ಜಿ. ಡಿಪ್ಲೋಮಾ ಇನ್ ಸೈಬರ್ ಸೆಕ್ಯೂರಿಟಿ ಎಂಡ್ ಎಥಿಕಲ್ ಹ್ಯಾಕಿಂಗ್ ಕಾರ್ಯಕ್ರಮವನ್ನು ನಿಯಂತ್ರಿಸುವ ವಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು ಮತ್ತು ಅಧಿಸೂಚನೆ ಹೊರಡಿಸಲು ಸೂಚಿಸಲಾಯಿತು.

**III. ಕುಲಪತಿಗಳು, ಸಿಂಡಿಕೇಟು, ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳಿಂದ ಬಂದ ಪ್ರಸ್ತಾವನೆಗಳು.**

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ. 3:1 (2022-23)

**ವಿಷಯ:** ರಾಷ್ಟ್ರೀಯ ಶಿಕ್ಷಣ ನೀತಿ2020ರ ಮಾದರಿ ಪ್ರಕಾರ ತಯಾರಿಸಿರುವ ಬಿ.ಹೆಚ್.ಎಂ. ಪದವಿ ಕಾರ್ಯಕ್ರಮದ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ಗಳ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಕಾಲೇಜುಗಳಿಂದ ವಿದ್ಯಾರ್ಥಿಗಳ ದಾಖಲಾತಿ ಹೊಂದಿದ ಮತ್ತು ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ ವಿದ್ಯಾರ್ಥಿಗಳ ಅಂಕಿ ಅಂಶಗಳ ವರದಿಯನ್ನು ತರಿಸುವಂತೆ ತಿಳಿಸಿ ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು. ಹಾಗೂ ಸದರಿ ಕಾರ್ಯಕ್ರಮಕ್ಕೆ ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳ ವಿವರ, ಉತ್ತೀರ್ಣರಾದ ವಿದ್ಯಾರ್ಥಿಗಳ ವಿವರ ಹಾಗೂ ಸದರಿ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮದಿಂದಾದ ಉಪಯೋಗದ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವಂತೆ ಎಲ್ಲಾ ಕಾಲೇಜುಗಳಿಗೆ ಸುತ್ತೋಲೆಯನ್ನು ನೀಡಿ ವರದಿ ಪಡೆದುಕೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ. 3:2 (2022-23)

**ವಿಷಯ:** Artificial Intelligence, ಕೌಶಲ್ಯವರ್ಧಕ ಕೋರ್ಸನ್ನು ಬೋಧಿಸಲು ಉಪನ್ಯಾಸಕರ ವಿದ್ಯಾರ್ಹತೆ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಸದರಿ ಉಪನ್ಯಾಸಕರ ವಿದ್ಯಾರ್ಹತೆಯಲ್ಲಿ ಹೆಚ್ಚುವರಿಯಾಗಿ Masters degree in Information Science & Technology ಯನ್ನು ಸೇರಿಸಿ ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ. 3:3 (2022-23)

**ವಿಷಯ:** ಕೌಶಲ್ಯವರ್ಧಕ ಕೋರ್ಸುಗಳಡಿ ಬರುವ Artificial Intelligence ಕೋರ್ಸ್‌ನ ಪರಿಷ್ಕೃತ ಪಠ್ಯ ಕ್ರಮದ ಅನುಮೋದನೆ ಬಗ್ಗೆ

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:4 (2022-23)

**ವಿಷಯ:** ರಾಷ್ಟ್ರೀಯ ಶಿಕ್ಷಣ ನೀತಿಯ ಮಾದರಿ ಪ್ರಕಾರ ತಯಾರಿಸಿರುವ ಬಿ.ಎಸ್ಸಿ. (ಫುಡ್ ಟೆಕ್ನಾಲಜಿ) ಪದವಿ ಕಾರ್ಯಕ್ರಮದ ತೃತೀಯ ಮತ್ತು ಚತುರ್ಥ ಸೆಮಿಸ್ಟರ್‌ಗಳ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪಠ್ಯಕ್ರಮಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:5 (2022-23)

**ವಿಷಯ:** ಸ್ನಾತಕೋತ್ತರ ಎಂ.ಬಿ.ಎ. (ಹೆಲ್ತ್ ಸೇಫ್ಟಿ ಎಂಡ್ ಎನ್ವಿರಾನ್‌ಮೆಂಟ್) ಕಾರ್ಯಕ್ರಮದ ವಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ವಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಸಿಬ್ಬಂದಿ:ಶೈ.ಮ.ಸಾ.ಸ.3:6 (2022-23)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಮೊಲಿಕ್ಯುಲರ್ ಬಯೋಲಜಿ (Molecular Biology) ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಸಹ ಪ್ರಾಧ್ಯಾಪಕರ ಸಂಖ್ಯೆಯನ್ನು 2 ಮತ್ತು ಸಹಾಯಕ ಪ್ರಾಧ್ಯಾಪಕರ ಸಂಖ್ಯೆಯನ್ನು 4 ಎಂದು ತಿದ್ದುಪಡಿ ಮಾಡಿ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ತಿಳಿಸಿ ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಸಿಬ್ಬಂದಿ:ಶೈ.ಮ.ಸಾ.ಸ.3:7 (2022-23)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪ್ರಯೋಗಾಲಯ ಸಹಾಯಕರ ಹುದ್ದೆಯನ್ನು ಸೇರಿಸಿ ತಿದ್ದುಪಡಿಯನ್ನು ಮಾಡಿ ಸರಕಾರದ ಅನುಮೋದನೆಗೆ ಸಲ್ಲಿಸುವಂತೆ ತಿಳಿಸಿ ಅನುಮೋದಿಸಲಾಯಿತು

**ಕಾರ್ಯಸೂಚಿ:** ಸಿಬ್ಬಂದಿ:ಶೈ.ಮ.ಸಾ.ಸ. 3:8 (2022-23)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರಸ್ನಾತಕೋತ್ತರ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:**

1. ಅನುಚರ ಎನ್ನುವ ಬದಲಿಗೆ ಕ್ಯುರೇಟರ್ ಎಂದು ತಿದ್ದುಪಡಿಗೊಳಿಸಿ ಹುದ್ದೆಯ ಬೇಡಿಕೆ ಸಲ್ಲಿಸುವಂತೆ ತಿಳಿಸಲಾಯಿತು
2. ಕಳೆದ ಐದು ವರ್ಷದ ಅವಧಿಯಲ್ಲಿನ ವಿದ್ಯಾರ್ಥಿಗಳ ದಾಖಲಾತಿ ಅಂಕಿಅಂಶಗಳೊಂದಿಗೆ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ ಬಗ್ಗೆ ಮಾಹಿತಿ ಮತ್ತು ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಗಿಸಿ ಹುದ್ದೆಗಳಿಗೆ ಸೇರಿದ ಬಗ್ಗೆ ಮಾಹಿತಿ ಪಡೆದುಕೊಂಡು ಪರಿನಿಯಮದ ಪ್ರಸ್ತಾವನೆಯಲ್ಲಿ ವಿವರವಾಗಿ ನಮೂದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ತಿಳಿಸಿ ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಸಿಬ್ಬಂದಿ:ಶೈ.ಮ.ಸಾ.ಸ. 3:9 (2022-23)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಫುಡ್ ಸಾಯನ್ಸ್ ಮತ್ತು ನ್ಯೂಟ್ರಿಷನ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:10 (2022-23)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಸ್ವಾಯತ್ತ ಕಾಲೇಜುಗಳನ್ನು ನಿರ್ವಹಿಸುವ ಅನುಶಾಸನದ ತಿದ್ದುಪಡಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:11 (2022-23)

**ವಿಷಯ:** ಪರಿಸರ ಅಧ್ಯಯನ, Ability Enhancement Compulsory Course ನ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮ ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:12 (2022-23)

**ವಿಷಯ:** ಪರಿಸರ ಅಧ್ಯಯನ, Ability Enhancement Compulsory Course ನ್ನು ಬೋಧಿಸಲು ಉಪನ್ಯಾಸಕರ ವಿದ್ಯಾರ್ಹತೆ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:13 (2022-23)

**ವಿಷಯ:** ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮಾದರಿ ಪ್ರಕಾರ ತಯಾರಿಸಿರುವ ಬಿ.ಎಸ್ಸಿ. (ಫುಡ್ ನ್ಯೂಟ್ರಿಷನ್ ಎಂಡ್ ಡೈಟೆಟಿಕ್ಸ್) ಪದವಿ ಕಾರ್ಯಕ್ರಮದ I-IV ಸೆಮಿಸ್ಟರ್‌ಗಳ (I-II ಸೆ. ಪರಿಷ್ಕೃತ) ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:14 (2022-23)

**ವಿಷಯ:** I-IV ಸೆಮಿಸ್ಟರ್ ಬಿ.ಎ./ಬಿ.ಎಸ್ಸಿ. ಪದವಿಕಾರ್ಯಕ್ರಮಗಳ Physical Education, Sports & Yoga ಕೋರ್ ಕೋರ್ಸಿನ (I–II ಸೆ. ಪರಿಷ್ಕೃತ) ಮತ್ತು ಮೌಲ್ಯಾಧಾರಿತ ಕೋರ್ಸುಗಳ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಸಿಬ್ಬಂದಿ:ಶೈ.ಮ.ಸಾ.ಸ.3:15 (2022-23)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳು ಪರಿನಿಯಮಕ್ಕೆ ತಿದ್ದುಪಡಿ ಮಾಡುವಬಗ್ಗೆ.

**ನಿರ್ಣಯ:** ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:16 (2022-23)

**ವಿಷಯ:** ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಪಿ.ಹೆಚ್.ಡಿ. ಕೋರ್ಸುವರ್ಕ್ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಹಣಕಾಸು:ಶೈ.ಮ.ಸಾ.ಸ.3:17 (2022-23)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2018-19ನೇ ಸಾಲಿನ ಲೆಕ್ಕಪರಿಶೋಧನ ವರದಿ-ಅನುಪಾಲನಾ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ಆಡಿಟ್ ರಿವ್ಯೂವ್ ಕಮಿಟಿಯನ್ನು ರಚಿಸಿ, ದಾಖಲಾತಿಗಳನ್ನು ಒದಗಿಸುವುದು ಮತ್ತು ಸಂಬಂಧಪಟ್ಟವರಿಂದ ವಸೂಲಾತಿಗೆ ಕ್ರಮಕೈಗೊಳ್ಳುವಂತೆ ತಿಳಿಸಿ ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:18 (2022-23)

**ವಿಷಯ:** ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮಾದರಿ ಪ್ರಕಾರ ತಯಾರಿಸಿರುವ ಬಿ.ವಿ.ಎ. ಪದವಿ ಕಾರ್ಯಕ್ರಮದ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ಗಳ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:19 (2022-23)

**ವಿಷಯ:** ಕ್ರೆಡಿಟ್‌ಗಳು, ಬೋಧನಾವಧಿ ಮತ್ತು ಅಂಕಗಳ ಮಾರ್ಪಾಡುಗಳೊಂದಿಗೆ ಸಲ್ಲಿಸಿರುವ ಭಾರತ ಸಂವಿಧಾನ, Ability Enhancement Compulsory Course ನ ಪಠ್ಯಕ್ರಮದ ಬಗ್ಗೆ.

**ನಿರ್ಣಯ:** ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ:** ಹಣಕಾಸು:ಶೈ.ಮ.ಸಾ.ಸ.3:20 (2022-23)

**ವಿಷಯ:** 2021-22ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆಯ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ:** ಸಿಬ್ಬಂದಿ: ಶೈ.ಮ.ಸಾ.ಸ.3:21 (2022-23)

**ವಿಷಯ:** DRAFT STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE MANGALORE UNIVERSITY, AS PER THE UGC REGULATIONS, 2018ನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** 2018ರ ಮಂಗಳೂರು ವಿಶ್ವವಿದ್ಯಾನಿಲಯದ ಪರಿನಿಯಮ ಎಂದು ನಮೂದಿಸುವಂತೆ ತಿಳಿಸಿ ಅನುಮೋದಿಸಲಾಯಿತು.

**ಕಾರ್ಯಸೂಚಿ:** ಎಸಿಸಿ:ಶೈ.ಮ.ಸಾ.ಸ.3:22 (2022-23)

**ವಿಷಯ:** ಶೈಕ್ಷಣಿಕ ವರ್ಷ 2022-23 ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ವಿವಿಧ ಸ್ನಾತಕ/ಸ್ನಾತಕೋತ್ತರ/ಪಿಹೆಚ್.ಡಿ ಕಾರ್ಯಕ್ರಮಗಳಿಗೆ ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ ಬಗ್ಗೆ

**ನಿರ್ಣಯ:** ಶೈಕ್ಷಣಿಕ ಮಂಡಳಿ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಇತರ ವಿಷಯಗಳು:**

1. ಪತ್ರಿಕೆಗಳಲ್ಲಿ ಮೌಲ್ಯಮಾಪನ, ಫಲಿತಾಂಶ, ಅಂಕಪಟ್ಟಿಗಳ ವಿತರಣೆಗೆ ಸಂಬಂಧಿಸಿದಂತೆ ಬಂದ ವರದಿಗಳ ಬಗ್ಗೆ ಚರ್ಚಿಸಿ, ಈ ತಿಂಗಳ ಕೊನೆಯಲ್ಲಿ ಫಲಿತಾಂಶವನ್ನು ಪ್ರಕಟಿಸುವುದಾಗಿ ಕುಲಸಚಿವ(ಪರೀಕ್ಷಾಂಗ) ಇವರು ತಿಳಿಸಿದರು.

2. ದಿನಾಂಕ 17.12.2022 ರಂದು ನಡೆಯುವ ಬನ್ನಡ್ಕ ಘಟಕ ಕಾಲೇಜಿನ ಉದ್ಘಾಟನಾ ಸಮಾರಂಭಕ್ಕೆ ಎಲ್ಲರಿಗೂ ಆಹ್ವಾನ ಕೋರಿದರು.

3. ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಮತ್ತು ಅತ್ಯಾಧುನಿಕ ಸಂಶೋಧನಾ ಕೇಂದ್ರ ಬೆಳಪು ಇದನ್ನು ಫೆಬ್ರುವರಿ 2023 ರಂದು ಉದ್ಘಾಟಿಸುವುದಾಗಿ ತಿಳಿಸಿದರು

ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು ಮತ್ತು ಶೈಕ್ಷಣಿಕ ಮಂಡಳಿಯ ಕಲಾಪವನ್ನು ಫೇಸ್‌ಬುಕ್, ಯುಟ್ಯೂಬ್ ಮತ್ತು ಟ್ವಿಟರ್‌ನಲ್ಲಿ ನೇರಪ್ರಸಾರ ಮಾಡಿರುವುದಾಗಿ ಸಭೆಯ ಗಮನಕ್ಕೆ ತಂದು ಸಭೆಯನ್ನು ಮುಕ್ತಾಯಗೊಳಿಸಿದರು

ಕುಲಸಚಿವರು                                        ಕುಲಪತಿಗಳು